

ಫೋನು ಕೆಳಗಿರಿಸಲು ಮನಸ್ಸಾಗಲಿಲ್ಲ. ಹತ್ತು ನಿಮಿಷ ಕಳೆದರೂ ಸುದ್ದಿಯಿಲ್ಲ. ಏನಾದರೂ ಆಗಲಿ ಮತ್ತೊಮ್ಮೆ ಕರೆ ಮಾಡಿ ನೋಡುವ ಎಂದು ಮತ್ತೆ ಡಯಲ್ ಮಾಡಿದಳು.

''ಯಾಕೆ ಮತ್ತೆ ಮತ್ತೆ ಫೋನು ಮಾಡುತ್ತಿ? ಸ್ವಲ್ಪ ಹೊತ್ತು ತಡೆದುಕೋ, ನನ್ನ ಕಾರು ಅಪಘಾತ ಆಗಿದೆ. ಇರು ಮಾರಾಯ್ತಿ, ಸ್ವಲ್ಪ ಬಿಟ್ಟು ಕಾಲ್ ಮಾಡುವೆ" ಸಿಡುಕಿಕೊಂಡು ಅಷ್ಟಂದವನೇ ಇವಳ ಉತ್ತರಕ್ಕೂ ಕಾಯದೆ ಫೋನ್ ಕಟ್ ಮಾಡಿದ. ಕುಮುದಿನಿಯ ಜಂಘಾಬಲವೇ ಉಡುಗಿ ಹೋಯಿತು. ದೇವರೇ, ಏನಾಯಿತಪ್ಪ. ಮಗೂ ಬೇರೆ ಇತ್ತು. ಇವರಿಗೆ ಒಂದಿಷ್ಟು ಗಡಿಬಿಡಿ ಜಾಸ್ತಿ ಬೇರೆ. ಇವರೇ ರಾಂಗ್ ಸೈಡ್ ಹೋಗಿರಬೇಕು. ಇನ್ನು ಯಾರಿಗೆ ಏನಾಯಿತೋ, ತಿರುಪತಿ ತಿಮ್ಮಪ್ಪಾ... ನೀನೇ ಕಾಪಾಡು. ಯಾಕೋ ಇತ್ತೀಚೆಗೆ ವಿಪರೀತ ಭಾವುಕಳಾಗುತ್ತಿದ್ದಳು. ಮಾಧ್ಯಮಗಳಲ್ಲಿ ಬರುವ ಸಣ್ಣ ಸಣ್ಣ ಸುದ್ದಿಗಳ ಬಗ್ಗೆಯೂ ವಿಪರೀತ ಯೋಚನೆ. ಯಾಕೆ ಲೋಕದಲ್ಲಿ ಇರುವ ಕೆಟ್ಟದು ಎಲ್ಲಾ ನಮಗೇ ಆಗುತ್ತೇ ಅಂತ ಭಾವಿಸುತ್ತೀಯಾ ಎಂದು ಗಂಡ ಸಮಾಧಾನಿಸುತ್ತಿದ್ದ.

ಅವಳಿಗೆ ಮನಸ್ಸು ತಡೆಯಲಿಲ್ಲ. ಗಂಡ ಬೈದರೂ ಸರಿ, ಇವರಿಗೆ, ಮಗುವಿಗೆ ಏನೂ ಆಗಿಲ್ಲ ಅಲ್ವಾ ಅಂತ ಒಂದು ಮಾತು ಕೇಳಿಬಿಡೋಣ ಅಂತ ಧೈರ್ಯ ಮಾಡಿ ಮತ್ತೆ ರೀ ಡಯಲ್ ಒತ್ತಿದಳು. ಈ ಸಲ ಫೋನ್ ರಿಂಗಾದದ್ದೇ ಅವಳ ಗಂಡ ಫೋನ್ ಕಟ್ ಮಾಡುವುದಕ್ಕೆ ಹೋಗಿ ಫೋನ್ ರಿಸೀವ್ ಬಟನ್ ಒತ್ತಿ ಕಿಸೆಗೆ ಹಾಕಿಕೊಂಡಿರಬೇಕು. ಇವಳು ಹಲೋ... ಹಲೋ... ಅಂದದ್ದು ವ್ಯರ್ಥ. ಅತ್ತ ಕಡೆಯಿಂದ ಬಿರುಸಿನ ಮಾತುಕತೆ ಅಸ್ಪಷ್ಟವಾಗಿ ಕೇಳಿ ಬರುತ್ತಿತ್ತು. ಅವಳು ಸರಿಯಾಗಿ ನೆಟ್‌ವರ್ಕ್ ಸಿಗುವಲ್ಲಿಗೆ ಹೋಗಿ ಮೊಬೈಲನ್ನು ಕಿವಿಯ ಹತ್ತಿರ ಹಿಡಿದುಕೊಂಡಳು.

''ತಪ್ಪು ನನ್ನದೇ, ನಾನು ಒಪ್ಪಿಕೊಂಡಿದ್ದೀನಿ. ಈಗ